**ದಿನಾಂಕ: 19-12-2020 ರಂದು ವಾರ್ಡ್ ಸಂಖ್ಯೆ 197 ವಸಂತಪುರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.**

***ಹಾಜರಿದ್ದ ಸಮಿತಿ ಸದಸ್ಯರು:-***

1. ಶ್ರೀ ಮಹದೇಶ್.ಹೆಚ್.ಎಸ್- ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ಕಾರ್ಯಪಾಲಕ ಅಭಿಯಂತರರು ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ ಬೊಮ್ಮನಹಳ್ಳಿ ವಲಯ
2. ಶ್ರೀ ಜಗದೀಶ್ ರಾವ್ ವಾಡೆ-ಸದಸ್ಯರು
3. ಶ್ರೀ ಎನ್.ಆರ್.ಸೋಮಶೇಖರ್ -ಸದಸ್ಯರು
4. ಶ್ರೀ ಮಹಾಬಲೇಶ್ವರ್-ಸದಸ್ಯರು
5. ಶ್ರೀ ಬಿ.ಎಸ್.ರಾಜೇಶ್-ಸದಸ್ಯರು
6. ಶ್ರೀ ಶರಣ್-ಸದಸ್ಯರು
7. ಶ್ರೀ ಶ್ರೀಧರ್-ಸದಸ್ಯರು
8. ಶ್ರೀ ಶ್ರೀನಿವಾಸ್ ರೆಡ್ಡಿ ಬಿಡಿಎ ಬಡಾವಣೆ ಬನಶಂಕರಿ 5ನೇ ಹಂತ-ಸದಸ್ಯರು
9. ಶ್ರೀ ರಮಾ ಶ್ರೀನಿವಾಸ್-ಸದಸ್ಯರು

***ಹಾಜರಿದ್ದ ಅಧಿಕಾರಿಗಳು:-***

1. ಶ್ರೀ ನರೇಂದ್ರ ಕುಮಾರ್.ಎ – ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ವಾರ್ಡ್ 197 ವಸಂತಪುರ)
2. ಶ್ರೀ ಮಹೇಶ್ – ಕಿರಿಯ ಆರೋಗ್ಯ ಪರಿವೀಕ್ಷಕರು (ವಾರ್ಡ್ 197 ವಸಂತಪುರ)
3. ಶ್ರೀನಿವಾಸ್ – ಟ್ರಾಫಿಕ್ ಪೋಲೀಸ್ ಠಾಣೆ, ಕುಮಾರಸ್ವಾಮಿ ಲೇಔಟ್ ಬಡಾವಣೆ
4. ಶ್ರೀಮತಿ ಪ್ರೀತಿ.ಜೆ – ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ
5. ಶ್ರೀ ನವೀನ್ ಕುಮಾರ್.ಕೆ –ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ

ಮೇಲೆ ಹಾಜರಿದ್ದ ಸಮಿತಿ ಸದಸ್ಯರ ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀ ಮಹದೇಶ್.ಹೆಚ್.ಎಸ್ ಕಾರ್ಯಪಾಲಕ ಅಭಿಯಂತರರು ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು, ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡಂತೆ ವಿವಿಧ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯು ವಿವರವಾಗಿ ಚರ್ಚಿಸಿದಂತೆ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿ / ಇಲಾಖೆಗಳಿಗೆ ಸೂಚಿಸಲಾಗಿರುತ್ತದೆ.

1. **ಬೆಂಗಳೂರು ನೀರು ಮತ್ತು ಒಳಚರಂಡಿ ಇಲಾಖೆಗೆ ಸಂಬಂಧಪಟ್ಟಂತೆ**

   ➢ ನಾರಾಯಣನಗರ 1ನೇ ಬ್ಲಾಕ್‌ನಲ್ಲಿ ಮ್ಯಾನ್‌ಹೋಲ್‌ನಿಂದ ಸ್ಯಾನಿಟರಿ ನೀರು ಹರಿಯುತ್ತಿರುತ್ತದೆ, 80 ಅಡಿ ರಸ್ತೆಯ ಲಿಬರ್ಟಿ ಸ್ವ್ಯಯರ್ ಬಳಿ ಸ್ಯಾನಿಟರಿ ನೀರು ರಸ್ತೆಯಲ್ಲಿ ಹರಿಯುತ್ತಿರುತ್ತದೆ. ನಾರಾಯಣನಗರ 3ನೇ ಬ್ಲಾಕ್‌ನ 4ನೇ ಮುಖ್ಯರಸ್ತೆಯಲ್ಲಿ ಮ್ಯಾನ್‌ಹೋಲ್‌ಗಳು ದುಸ್ಥಿತಿಯಲ್ಲಿದ್ದು ಅದನ್ನು ರಸ್ತೆಯ ಮಟ್ಟಕ್ಕೆ ಎತ್ತರಿಸಬೇಕಾಗಿರುತ್ತದೆ. ನಾರಾಯಣನಗರ 1ನೇ ಮತ್ತು 3ನೇ ಬ್ಲಾಕ್‌ನಲ್ಲಿ ವಾರಕ್ಕೆ 2 ಬಾರಿ ನೀರನ್ನು ಸರಬರಾಜು ಮಾಡುತ್ತಿದ್ದು, ಪ್ರತಿದಿನ ನೀರು ಸರಬರಾಜು ಮಾಡಲು ಕೋರಿರುತ್ತಾರೆ. ದೊಡ್ಡಕಲ್ಲಸಂದ್ರ ಕುಮಾರನ್ಸ್ ಶಾಲೆಯ ರಸ್ತೆಯಲ್ಲಿ ಒಳಚರಂಡಿ ಸಂಪರ್ಕದ ಪೈಪುಗಳು ದುಸ್ಥಿತಿಯಲ್ಲಿರುತ್ತದೆ ಎಂದು

Scanned with CamScanner

ದೂರಿರುತ್ತಾರೆ. ಈ ಬಗ್ಗೆ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಂಗಳೂರು ನೀರು ಮತ್ತು ಒಳಚರಂಡಿ ವಿಭಾಗ ರವರಿಗೆ ಸೂಚಿಸಿರುತ್ತಾರೆ.

2. **ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆಗೆ ಸಂಬಂಧಪಟ್ಟಂತೆ**

➢ ವಾರ್ಡ್ ವ್ಯಾಪ್ತಿಯಲ್ಲಿ ಹಸಿ ಕಸ ಮತ್ತು ಒಣ ಕಸವನ್ನು ವಿಂಗಡಣೆ ಮಾಡುತ್ತಿದ್ದು, ಸದರಿ ಇಲಾಖೆಯವರು ಹಸಿ ಕಸವನ್ನು ಪ್ರತಿದಿನ ತೆಗೆದುಕೊಳ್ಳುತ್ತಿರುತ್ತಾರೆ ಮತ್ತು ಒಣ ಕಸವನ್ನು ವಾರಕ್ಕೊಮ್ಮೆ ಸಂಗ್ರಹಿಸುತ್ತಿರುತ್ತಾರೆ. ವಾರ್ಡ್ ವ್ಯಾಪ್ತಿಯಲ್ಲಿ ಮರದ ಎಲೆಗಳು ಕೊಂಬೆಗಳು ವೀಡ್ಸ್‌ಗಳನ್ನು ತೆರವುಗೊಳಿಸಲು ಕೋರಿರುತ್ತಾರೆ. ನಾರಾಯಣನಗರ 3ನೇ ಬ್ಲಾಕ್‌ನಲ್ಲಿರುವ ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲು ಕೋರಿರುತ್ತಾರೆ. ಖಾಲಿ ನಿವೇಶನದಲ್ಲಿ ಬೆಳೆದಿರುವ ಗಿಡ-ಗಂಟೆ, ವೀಡ್ಸ್‌ಗಳನ್ನು ತೆರವುಗೊಳಿಸಲು ತಿಳಿಸಿರುತ್ತಾರೆ. ಬನಶಂಕರಿ 5ನೇ ಹಂತ ಬಿಕಾಸಿಪುರದ ಅಬ್ದುಲ್ ಕಲಾಂ ಪಾರ್ಕ್ ಬಳಿ ಮಧ್ಯದ ಬಾಟಲಿಗಳನ್ನು ರಸ್ತೆಯಲ್ಲಿ ಬಿಸಾಡುತ್ತಿರುತ್ತಾರೆ ಈ ಬಗ್ಗೆ ಕ್ರಮ ಕೈಗೊಳ್ಳಲು ಕೋರಿರುತ್ತಾರೆ ಮತ್ತು 100 ಅಡಿ ರಸ್ತೆಯಲ್ಲಿ ಟೀ ಅಂಗಡಿಯಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದ್ದು, ಇದನ್ನು ತೆರವುಗೊಳಿಸಲು ಕೋರಿದ್ದು, ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಕಿರಿಯ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆ ರವರಿಗೆ ಸೂಚಿಸಿರುತ್ತಾರೆ.

3. **ಬೆಸ್ಕಾಂ ಇಲಾಖೆಗೆ ಸಂಬಂಧಪಟ್ಟಂತೆ.**

➢ ಗುಬ್ಬಲಾಳ ರಸ್ತೆಯಲ್ಲಿರುವ ಬೀದಿ ದೀಪಗಳ ಕಂಬಗಳನ್ನು ರಸ್ತೆ ಬದಿಯ ಚರಂಡಿಯ ಬಳಿ ಸ್ಥಳಾಂತರಿಸಲು ತಿಳಿಸಿರುತ್ತಾರೆ. ಸಿಂಗಾಪುರ ಗಾರ್ಡನ್‌ನಲ್ಲಿ ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ಏರುಪೇರು ಉಂಟಾಗುತ್ತಿರುತ್ತದೆ ಮತ್ತು ಟ್ರಾನ್ಸ್‌ಫರ್‌ಮರ್ ಅನ್ನು ಉನ್ನತೀಕರಣ ಮಾಡಬೇಕಾಗಿ ತಿಳಿಸಿರುತ್ತಾರೆ ಹಾಗೂ ನಾರಾಯಣನಗರ 3ನೇ ಬ್ಲಾಕ್‌ನಲ್ಲಿ ಅಗೆದಿರುವ ರಸ್ತೆಯನ್ನು ಸುಸ್ಥಿತಿ ತರಬೇಕೆಂದು ಕೋರಿರುತ್ತಾರೆ. ಬನಸಂಕರಿ 5ನೇ ಹಂತ, ಬಿಕಾಸಿಪುರ ಇಲ್ಲಿ ಚಿನ್ನರ ಅಂಗಳ ಮುಂಭಾಗದಲ್ಲಿನ ಹಳೆಯ ಟ್ರಾನ್ಸ್ ಫಾರಮರ್‌ಗಳಿಂದ ಇಲ್ಲಿ ಓಡಾಡುವ ಚಿಕ್ಕ ಮಕ್ಕಳಿಗೆ ತೊಂದರೆಯಾಗುವ ಸಂಭಂವವಿರುತ್ತದೆಂದು ಸದರಿ ಹಳೆಯ ಟ್ರಾನ್ಸ್ ಫಾರ್‌ಮರ್ ಅನ್ನಯ ಸಿಂಗಲ್ ಪೋಲ್ ಟ್ರಾನ್ಸ್ ಫಾರ್‌ಮರ್ ಆಗಿ ನವೀಕರಿಸಬೇಕೆಂದು ಕೋರಿರುತ್ತಾರೆ. ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಇಲಾಖೆ ರವರಿಗೆ ಸೂಚಿಸಿರುತ್ತಾರೆ.

4. **ಬೀದಿ ದೀಪಗಳ ನಿರ್ವಹಣೆಗೆ ಸಂಬಂಧಪಟ್ಟಂತೆ**

➢ ಕನಕಪುರ ಮುಖ್ಯರಸ್ತೆ ಮತ್ತು ಗುಬ್ಬಲಾಳ ರಸ್ತೆಯಲ್ಲಿರುವ ಹೈ ಮಾಸ್ ದೀಪವನ್ನು ಸ್ಥಳಾಂತರಿಸಲು ತಿಳಿಸಿರುತ್ತಾರೆ. ನಾರಾಯಣನಗರ 3ನೇ ಬ್ಲಾಕ್‌ನಲ್ಲಿರುವ ದೇವಸ್ಥಾನದ ಪಾರ್ಕ್‌ನಲ್ಲಿ 3-4 ದೀಪದ ಕಂಬಗಳು ಹಾಳಾಗಿರುತ್ತದೆ. ವೆಸ್ಟ್ ಎಂಡ್ ಪಾರ್ಕ್‌ನಲ್ಲಿರುವ ವಿದ್ಯುತ್ ದೀಪದ ಕಂಬವು ಹಾಳಾಗಿದ್ದು, ಸರಿಪಡಿಸಲು ಕೋರಿರುತ್ತಾರೆ. ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ ಬೊಮ್ಮನಹಳ್ಳಿ ವಲಯ ರವರಿಗೆ ಸೂಚಿಸಿರುತ್ತಾರೆ.

5. **ಟ್ರಾಫಿಕ್ ಪೋಲೀಸ್ ಇಲಾಖೆಗೆ ಸಂಬಂಧಪಟ್ಟಂತೆ**

➢ ಸಿಂಗಾಪುರ ಗಾರ್ಡನ್ ಕನಕಪುರ ಮುಖ್ಯರಸ್ತೆ ಮತ್ತು ಗುಬ್ಬಲಾಳ ಮುಖ್ಯರಸ್ತೆ ಸೇರುವ ಜಾಗದಲ್ಲಿ ಒಬ್ಬ ಹೋಮ್ ಗಾರ್ಡ್‌ನನ್ನು ನಿಯೋಜಿಸಲು ಕೋರಿರುತ್ತಾರೆ. ಗುಬ್ಬಲಾಳ ಮುಖ್ಯರಸ್ತೆ ನೋ-ಪಾರ್ಕಿಂಗ್ ಬೋರ್ಡ್‌ಗಳನ್ನು ಅಳವಡಿಸಲು ಕೋರಿರುತ್ತಾರೆ.ಕನಕಪುರ ಮುಖ್ಯರಸ್ತೆ ಜಂಕ್ಷನ್‌ನಲ್ಲಿ ಸ್ಪೀಡ್ ಬ್ರೇಕರ್ ಅಳವಡಿಸಲು ಕೋರಿರುತ್ತಾರೆ. ಗುಬ್ಬಲಾಳ ಜಂಕ್ಷನ್‌ನಲ್ಲಿ ಡಿವೈಡರ್ ಅಳವಡಿಸಲು ಕೋರಿರುತ್ತಾರೆ. ತುಂಬಾ ಹಳೆಯ ವಾಹನಗಳನ್ನು ಆರ್ಯ ಎಲಿಗೆನ್ಸ್ ಅಪಾರ್ಟ್‌ಮೆಂಟ್ ಬಳಿ ನಿಲುಗಡೆ ಮಾಡುತ್ತಿದ್ದು, ಇದನ್ನು ತೆರವುಗೊಳಿಸಲು ಕೋರಿದ್ದು, ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಪೋಲೀಸ್ ಇನ್ಸ್‌ಪೆಕ್ಟರ್ ಟ್ರಾಫಿಕ್ ವಿಭಾಗ ರವರಿಗೆ ಸೂಚಿಸಿರುತ್ತಾರೆ.

Scanned with CamScanner

6. **<u>ಕಾರ್ಯಪಾಲಕ ಅಭಿಯಂತರರು ಯೋಜನೆ ರವರಿಗೆ ಸಂಬಂಧಪಟ್ಟಂತೆ</u>**

- ವಾರ್ಡ್ ವ್ಯಾಪ್ತಿಯಲ್ಲಿನ ಪಾರ್ಕ್‌ನಲ್ಲಿ ಬೆಳೆದಿರುವ ವೀಡ್ಸ್ ಮತ್ತು ಗಿಡಗಂಟೆಗಳನ್ನು ತೆರವುಗೊಳಿಸಲು ಕೋರಿರುತ್ತಾರೆ ಮತ್ತು ಆಟದ ಮೈದಾನ ಹಾಗೂ ಪಾರ್ಕ್‌ಗಳಿಗೆ ನಾಮಫಲಕವನ್ನು ಅಳವಡಿಸಲು ಕೋರಿರುತ್ತಾರೆ. ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಕಾರ್ಯಪಾಲಕ ಅಭಿಯಂತರರು ಯೋಜನೆ ಬೊಮ್ಮನಹಳ್ಳಿ ವಲಯ ರವರಿಗೆ ಸೂಚಿಸಿರುತ್ತಾರೆ.

7. **<u>ಉಪವಿಭಾಗದ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ</u>**

- ರಾಮಾಂಜನೇಯನಗರ 3ನೇ ಮುಖ್ಯರಸ್ತೆ 7ನೇ ಅಡ್ಡರಸ್ತೆ ಜಂಕ್ಷನ್‌ನಲ್ಲಿ ಕಲ್‌ವರ್ಟ್ ನಿರ್ಮಾಣ ಮಾಡಲು ತಿಳಿಸಿರುತ್ತಾರೆ. ನಾರಾಯಣನಗರ 3ನೇ ಬ್ಲಾಕ್‌ನಲ್ಲಿ ಕರ್ಬ್‌ಗಳಿಗೆ ಪೈಂಟಿಂಗ್ ಮಾಡಲು ತಿಳಿಸಿರುತ್ತಾರೆ. ನಾರಾಯಣನಗರ 1ನೇ ಬ್ಲಾಕ್‌ನ 18ನೇ ಅಡ್ಡರಸ್ತೆ, 13ನೇ ಮುಖ್ಯರಸ್ತೆ, 16ನೇ ಎ ಮುಖ್ಯರಸ್ತೆಯಲ್ಲಿ ರಸ್ತೆಗೆ ಡಾಂಬರೀಕರಣ ಮಾಡಲು ತಿಳಿಸಿರುತ್ತಾರೆ. ರಾಮಾಂಜನೇಯನಗರ 7ನೇ ಅಡ್ಡರಸ್ತೆಯಲ್ಲಿ ರಸ್ತೆಗೆ ಡಾಂಬರೀಕರಣ ಮಾಡಲು ಕೋರಿರುತ್ತಾರೆ. ಚಿಕ್ಕಲಸಂದ್ರದಲ್ಲಿ ಜಿಯೋ ಕೇಬಲ್‌ನವರು ರಸ್ತೆಯನ್ನು ಅಗೆದು ಸರಿಯಾಗಿ ರೆಸ್ಟೋರೇಷನ್ ಮಾಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು ಉತ್ತರಹಳ್ಳಿ ಉಪವಿಭಾಗ ರವರಿಗೆ ಸೂಚಿಸಿರುತ್ತಾರೆ.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರಾದ ಶ್ರೀ ಮಹದೇಶ್.ಹೆಚ್.ಎಸ್ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ ಮಹದೇಶ್.ಹೆಚ್.ಎಸ್
ಅಧ್ಯಕ್ಷರು ಹಾಗೂ ಕಾರ್ಯಪಾಲಕ ಅಭಿಯಂತರರು
ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ
ಬೊಮ್ಮನಹಳ್ಳಿ ವಲಯ

ಶ್ರೀ ನರೇಂದ್ರ ಕುಮಾರ್.ಪಿ
ಸಂಚಾಲಕರು ಹಾಗೂ ಸ.ಅ-197

**ಪ್ರತಿಯನ್ನು:-**

1. ಜಂಟಿ ಆಯುಕ್ತರು ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು ಬೆಂಗಳೂರು-ದಕ್ಷಿಣ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.

Scanned with CamScanner